# [9ನೇ ತರಗತಿ ಕನ್ನಡ ಮೌಲ್ವಿ ಪಾಠದ ನೋಟ್ಸ್ KannadaPdf.com](https://kannadapdf.com/)

ತರಗತಿ : 9ನೇ ತರಗತಿ

ಪಾಠದ ಹೆಸರು : ಮೌಲ್ವಿ

ಕೃತಿಕಾರರ ಹೆಸರು : ಗೊರೂರು ರಾಮಸ್ವಾಮಿ ಅಯ್ಯಂಗಾರ್

## ಕೃತಿಕಾರರ ಪರಿಚಯ :



ಗೊರೂರು ರಾಮಸ್ವಾಮಿ ಅಯ್ಯಂಗಾರ್

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕ್ರಿ.ಶ. ೧೯೦೪ ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು . ಇವರು ಗರುಡಗಂಬದ ದಾಸಯ್ಯ , ಮೆರವಣಿಗೆ , ಹೇಮಾವತಿ ತೀರದಲ್ಲಿ , ಪುನರ್ಜನ್ಮ , ನಮ್ಮ ಊರಿನ ರಸಿಕರು ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ . ಅಮೆರಿಕದಲ್ಲಿ ಗೊರೂರು ಕೃತಿ ಪ್ರವಾಸಕಥನವಾಗಿದ್ದು , ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾಗಿದೆ . ಇವರಿಗೆ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್ , ೧೯೬೭ ರಲ್ಲಿ ತರೀಕೆರೆಯಲ್ಲಿ ನಡೆದ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿ ಮತ್ತು ೧೯೮೧ ರಲ್ಲಿ ಶಿರಸಿಯಲ್ಲಿ ಸಮಾವೇಶಗೊಂಡಿದ್ದ ೫೫ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಪುರಸ್ಕೃತರಾಗಿದ್ದಾರೆ.

## ಅ ] ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿ ,

**1 , ಕನ್ನಡ ಮೌಲ್ವಿಯ ವೃತ್ತಿ ಯಾವುದು ?**

ಉತ್ತರ : ಕನ್ನಡ ಮೌಲ್ವಿಯವರದು ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿ

**2. ಡಿ.ವಿ.ಜಿ.ಯವರ ಯಾವ ಕೃತಿ ಮೌಲ್ವಿಯ ಬಾಯಿಗೆ ಪೂರ್ತಿ ಬರುತಿತ್ತು ?**

ಉತ್ತರ : ಡಿ.ವಿ.ಜಿ.ಯವರ ' ಉಮರನ ಒಸಗೆ ' ಕೃತಿ ಮೌಲ್ವಿಯ ಬಾಯಿಗೆ ಪೂರ್ತಿ ಬರುತಿತ್ತು ,

**3. ಮೌಲ್ವಿ ಹಿಡಿದಿದ್ದ ಕನ್ನಡದ ಮಸ್ತಕ ಯಾವುದು ?**


| | |
|---|---|
| Download: [Kannadapdf.com](https://kannadapdf.com/) | [https://kannadapdf.com/](https://kannadapdf.com/) |

KannadaPdf.com

ಉತ್ತರ : ಮೌಲ್ವಿ ಹಿಡಿದಿದ್ದ ಕನ್ನಡದ ಪುಸ್ತಕ ' ಕುಮಾರವ್ಯಾಸ ಭಾರತ '

**4. ಕನ್ನಡದ ಮೌಲ್ವಿ ಎಂದು ಹೆಸರಾಗಿದ್ದವರು ಯಾರು ?**

ಉತ್ತರ : ಕನ್ನಡದ ಮೌಲ್ವಿ ಎಂದು ಹೆಸರಾಗಿದ್ದವರು ಒಬ್ಬ ಮುಸ್ಲಿಮ್ ಗುರು .

## ಆ ] ಕೊಟ್ಟಿರುವ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ

**1. ಮೌಲ್ವಿಯ ವಿದ್ಯಾಭ್ಯಾಸ ಹೇಗಾಯಿತು ?**

ಉತ್ತರ : ಮೌಲ್ವಿಯ ಊರಿನಲ್ಲಿ ಉರ್ದು ಶಾಲೆ ಇರಲಿಲ್ಲ . ಅವರ ತಂದೆಯವರಿಗೂ ಉರ್ದು ಓದಲೂ ಬರೆಯಲೂ ಬಾರದು . ಆರು ಮೈಲಿ ದೂರದ ಹಳ್ಳಿಯಲ್ಲಿ ಒಂದು ಉರ್ದು ಶಾಲೆ ಇತ್ತು . ಅಲ್ಲಿಯ ಉಪಾಧ್ಯಾಯರು ವಾರದಲ್ಲಿ ಎರಡು ದಿನ ( ಶನಿವಾರ , ಭಾನುವಾರ ) ಮನೆಗೆ ಬಂದು ತಮ್ಮ ಮಗನಿಗೆ ಉರ್ದು ಪಾಠವನ್ನು ಹೇಳುವಂತೆ ಅವರ ತಂದೆ ಗೊತ್ತು ಮಾಡಿದ್ದರು . ಆ ಉಪಾಧ್ಯಾಯರು ಬುದ್ಧಿವಂತರು . ಆದ್ದರಿಂದ ಮೌಲ್ವಿ ಉರ್ದುವನ್ನು ಬೇಗ ಬೇಗ ಕಲಿತರು .

**2. ಹುಸೇನ್ ಕೃಷ್ಣನ ಅಭಿನಯದ ಬಗ್ಗೆ ತಿಳಿಸಿ ,**

ಮೌಲ್ವಿಯವರ ಬಾಲ್ಯದಲ್ಲಿ ಅವರ ಹಳ್ಳಿಯಲ್ಲಿ ಒಬ್ಬ ಯಕ್ಷಗಾನದಲ್ಲಿ ಕೃಷ್ಣನ ಪಾತ್ರವನ್ನು ಅತ್ಯುತ್ಕೃಷ್ಟವಾಗಿ ಅಭಿನಯಿಸುತ್ತಿದ್ದನು . ರಂಗಸ್ಥಳದಲ್ಲಿ ಬಂದು ನಿಂತರೆ ಅವನ ವೇಷವನ್ನು , ವಾಕ್ ಶುದ್ಧಿಯನ್ನು ನೋಡಿ ವೈದಿಕ ಮನೆತನದ ವೃದ್ಧ ಸ್ತ್ರೀಯರೂ ಸಹ ಮೈ ಮರೆತು " ಕೃಷ್ಣ ಪರಮಾತ್ಮ ಕಾಪಾಡಪ್ಪ " ಎಂದು ಕೈ ಮುಗಿದು ಬಿಡುತ್ತಿದ್ದರು . ಆನಂತರ ಮೌಲ್ವಿಯವರು " ಕೃಷ್ಣ ಪರಮಾತ್ಮನಲ್ಲಿ ಬಂದ ಇವ ಹೊಸಕೇರಿಯ ಹುಸೇನ್ ಸಾಬಿ " ಎಂದರೂ ಸಹ ಆ ವೃದ್ಧೆಯರು " ಹುಸೇನ್ ಸಾಬಿಯಂತ ಹುಸೇನ್ ಸಾಬಿ , ನಾವು ಕೈ ಮುಗಿದಿರುವುದು ತಲುಪುವುದು ಶ್ರೀ ಕೃಷ್ಣನಿಗೆ ಇವನು ಯಾರಾದರೇನು ? " ಎನ್ನುತ್ತಿದ್ದರು . ಕೊನೆಗೆ ಆ ಸಾಹೇಬನಿಗೆ " ಹುಸೇನ್ ಕೃಷ್ಣ " ಎಂದೇ ಹೆಸರಾಯಿತು ,

**3. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು ?**

ಉತ್ತರ ಕನ್ನಡ ಮೌಲ್ವಿಯು , ಆಜಾನುಬಾಹುವಾಗಿ ಪುಷ್ಟವಾಗಿ ಬೆಳೆದಿದ್ದ ಎತ್ತರದ ಕೆಂಪನೆಯ ಆಳು . ಮುಖದಲ್ಲಿ ಸಹ ಒಳ್ಳೆಯ ಕಳೆ ಇತ್ತು , ಕಣ್ಣಿನ ದೃಷ್ಟಿ ತೀಕ್ಷ್ಣವಾಗಿತ್ತು . ಗಡ್ಡ ಪೂರ್ಣವಾಗಿ ಬೆಳ್ಳಗಾಗಿ ಶುದ್ಧಿ ಮಾಡಿದ್ದ ಹತ್ತಿಯ ತುಪ್ಪಳದಂತೆ ತೋರುತ್ತಿತ್ತು , ವಿಶಾಲವಾದ ಹಣೆ , ಗಂಭೀರವಾದ ಮುಖ , ಮಡಿ - ಮಡಿ ಇಸ್ತ್ರೀ ಮಾಡಿದ್ದ ಬೆಳೆಯ ಶರಾಯಿ ( ಕೋಟು ) ಇವುಗಳಿಂದ ಆತನನ್ನು ನೋಡುವವರಿಗೆ ಇವನೊಬ್ಬ ಮರ್ಯಾದಸ್ತ ಸದ್ಗೃಹಸ್ಥ ಎಂಬ ಭಾವನೆ ಉಂಟಾಗುತ್ತಿತ್ತು .

## ಇ ] ಕೊಟ್ಟಿರುವ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ ,

**1. ಗೊರೂರು ಹಾಗೂ ಮೌಲ್ವಿಯ ನಡುವೆ ನಡೆದ ಸಂಭಾಷಣೆಯನ್ನು ಸಂಕ್ಷೇಪಿಸಿ ಬರೆಯಿರಿ .**

KannadaPdf.com

ಗೊರೂರರು ಪ್ರಯಾಣಿಸುತ್ತಿದ್ದ ಬಸ್ಸಿಗೆ ಒಬ್ಬ ಮುಸಲ್ಮಾನ ಹತ್ತಿದ , ಅವರನ್ನು ಅವನ ಕಡೆಗೆ ಆಕರ್ಷಿಸಿದ್ದು ಆ ಗೃಹಸ್ಥನ ಕೈಲಿದ್ದ ' ಕುಮಾರವ್ಯಾಸ ಭಾರತ ' ಕೃತಿ , ಹೇಗಾದರೂ ಮಾಡಿ ಆತನನ್ನು ಮಾತನಾಡಿಸಬೇಕು ಎಂದು ಬಳಿಗೆ ಹೋಗಿ ಮಾತನ್ನಾರಂಭಿಸಿದರು .

ಗೊರೂರು : ನಿಮಗೆ ಕನ್ನಡ ಬರುತ್ತದೆಯೇ ?

ಮೌಲ್ವಿ : ಹೌದು , ನಾನು ಕನ್ನಡ ಕಲಿತದ್ದು ಮೂರನೇ ತರಗತಿವರೆಗೆ , ಆದರೆ ಅದರಿಂದಲೇ ಮೂವತ್ತು ವರ್ಷ ನಿಭಾಯಿಸಿಬಿಟ್ಟೆ . ನನಗೆ ನಿವೃತ್ತಿ ಆಯಿತು .

ಗೊರೂರು : ಯಾವ ಕೆಲಸದಿಂದ ನಿವೃತ್ತರಾದಿರಿ ?

ಮೌಲ್ವಿ : ಪ್ರೈಮರಿ ಶಾಲಾ ಉಪಾಧ್ಯಾಯ ವೃತ್ತಿಯಿಂದ ,

ಗೊರೂರು : ಕನ್ನಡ ಉಪಾಧ್ಯಾಯರಾಗಿಯೋ ಉರ್ದು ಉಪಾಧ್ಯಾಯರಾಗಿಯೋ ?

ಮೌಲ್ವಿ : ಕನ್ನಡ ಉಪಾಧ್ಯಾಯರಾಗಿ ,

ಗೊರೂರು : ಹಾಗಾದರೆ ನಿಮಗೆ ಉರ್ದು ಬರುವುದಿಲ್ಲವೇ ?

ಮೌಲ್ವಿ : ನಾನು ಕಲಿತಿದ್ದು , ಉರ್ದು , ಕಲಿಸಿದ್ದು ಕನ್ನಡ , ಆಗ ನಮ್ಮ ಊರಿನಲ್ಲಿ ಉರ್ದು ಶಾಲೆ ಇರಲಿಲ್ಲ . ನಮ್ಮ ತಂದೆಯವರಿಗೂ ಉರ್ದು ಓದಲೂ ಬರೆಯಲೂ ಬಾರದು . ಆರು ಮೈಲಿ ದೂರದ ಹಳ್ಳಿಯಲ್ಲಿ ಒಂದು ಉರ್ದು ಶಾಲೆಯ ಉಪಾಧ್ಯಾಯರು ವಾರದಲ್ಲಿ ಎರಡು ದಿನ ನಮ್ಮ ಮನೆಗೆ ಬಂದು ನನಗೆ ಉರ್ದು ಪಾಠವನ್ನು ಹೇಳುವಂತೆ ನಮ್ಮ ತಂದೆ ಗೊತ್ತು ಮಾಡಿದ್ದರು . ಆ ಉಪಾಧ್ಯಾಯರು ಬುದ್ಧಿವಂತರು , ನಾನು ಉರ್ದುವನ್ನು ಬೇಗ ಬೇಗ ಕಲಿಕೆ ,

ಗೊರೂರು : ಭಾರತದ ಕಥೆಯಲ್ಲಿ ನಿಮ್ಮ ಧರ್ಮ ನಂಬಿಕೆಗೆ ವಿರೋಧವಾದುದು ಏನೂ ಇಲ್ಲವೇ ?

ಮೌಲ್ವಿ : ಇದು ಧರ್ಮದ ಕಥೆ . ಎಲ್ಲ ಮತಗಳೂ ಹೇಳುವುದು ಒಂದೇ ' ಮನುಷ್ಯ ಒಳ್ಳೆಯವನಾಗಿರಬೇಕು ' ಎಂದು

ಗೊರೂರು : ಕನ್ನಡದಲ್ಲಿ ಹೆಚ್ಚು ಪುಸ್ತಕ ಓದುತ್ತೀರಾ ?

ಮೌಲ್ವಿ : ಹೌದು ಓದುತ್ತೇನೆ , ನಿತ್ಯ ಮಲಗುವುದಕ್ಕೆ ಮುಂಚೆ ಎರಡು ಗಂಟೆಯಾದರೂ ನಾನು ಓದಲೇ ಬೇಕು , ಓದದೇ ಮಲಗಿದರೆ ನಿದ್ರೆ ಬರುವುದಿಲ್ಲ . ಶ್ರೀ ಡಿ.ವಿ.ಗುಂಡಪ್ಪನವರ ' ಉಮರನ ಒಸಗೆ ' ನನಗೆ ಪೂರ್ತಿ ಬಾಯಿಗೆ ಬರುತ್ತದೆ . ನಿಮ್ಮ ಊರು ಯಾವುದು ?

ಗೊರೂರು : ಹಾಸನದ ಹತ್ತಿರದ ಒಂದು ಹಳ್ಳಿ ಗೊರೂರು ,

ಮೌಲ್ವಿ : ನಾನೂ ಗೊರೂರಿಗೆ ಹೋಗಿದ್ದೇನೆ . ಗೊರೂರು ರಾಮಸ್ವಾಮಿ ಅಯ್ಯಂಗಾರು ಇದಾರಲ್ಲ , ಬಹಳ ಚೆನ್ನಾಗಿ ಕಥೆಗಳನ್ನು ಬರೆಯುತ್ತಾರೆ .

ಗೊರೂರು : ಗೊರೂರಿಗೆ ಹೋಗಿದ್ದಾಗ ಅವರನ್ನು ಸಂಧಿಸಿದ್ದೀರಾ ?

ಮೌಲ್ವಿ : ಇಲ್ಲ . ಆ ವೇಳೆಗೆ ನಾನು ಅವರ ಪುಸ್ತಕಗಳನ್ನು ನೋಡಿರಲಿಲ್ಲ . ಈಚೆಗೆ ಓದಿದೆ . ನೋಡಬೇಕಾದ ಮನುಷ್ಯರು .

| Download: Kannadapdf.com | https://kannadapdf.com/ |
|---|---|

ಗೊರೂರು : ಅವರು ನಿಮ್ಮೆದುರಿನಲ್ಲಿ ಈಗ ಬಂದರೆ ಏನು ಮಾಡುತ್ತೀರಿ ?

ಮೌಲ್ವಿ : ಮಾಡುವುದೇನು ? ಅತ್ಯಂತ ಸಂತೋಷದಿಂದ ಆಲಿಂಗನ ಮಾಡಿಕೊಳ್ಳುತ್ತೇನೆ .

ಗೊರೂರು : ನಾನೇ ಆ ಪಾಣಿ ,

ಮೌಲ್ವಿ : ಇವತ್ತೇ ಸುದಿನ , ದೇವರ ದಯೆ ನಾವಿಬ್ಬರೂ ಸೇರಿದೆವು . ( ಎಂದು ಆಲಂಗಿಸಿದರು )

## ಈ ] ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ ,

### 1. " ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀರಿ ? "

ಆಯ್ಕೆ : ಈ ವಾಕ್ಯವನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ' ಕನ್ಯಾಕುಮಾರಿ ಮತ್ತು ಇತರ ಕಥೆಗಳು ' ಕಥಾ ಸಂಕಲನದಿಂದ ಆರಿಸಲಾಗಿರುವ ' ಕನ್ನಡ ಮೌಲ್ವಿ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ : ಗೊರೂರು ಅವರು ಮೌಲ್ವಿಗೆ ತಮ್ಮದು ' ಹಾಸನ ಜಿಲ್ಲೆಯ ಗೊರೂರು ' ಎಂದು ಪರಿಚಯ ಮಾಡಿಕೊಂಡಾಗ ಆ ಮೌಲ್ವಿಯ " ನಾನೂ ಗೊರೂರಿಗೂ ಹೋಗಿದ್ದೇನೆ . ಆ ಗೊರೂರು ರಾಮಸ್ವಾಮಿ ಅಯ್ಯಂಗಾರು ಇದಾರಲ್ಲ , ಬಹಳ ಚೆನ್ನಾಗಿ ಕಥೆಗಳನ್ನು ಬರೆಯುತ್ತಾರೆ " ಎಂದು ಹೇಳಿದಾಗ ಗೊರೂರರು " ನೀವು ಅವರನ್ನು ಭೇಟಿಮಾಡಿದ್ದೀರಾ ? " ಎಂದಾಗ ಅವರು ಇಲ್ಲವೆನ್ನುತ್ತಾರೆ . ಆ ಸಂದರ್ಭದಲ್ಲಿ ಗೊರೂರರು " ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀರಿ ? " ಎನ್ನುತ್ತಾರೆ .

ಸ್ವಾರಸ್ಯ : ತಮ್ಮ ಎದುರಿಗಿರುವವರು ಗೊರೂರರೆಂದು ತಿಳಿಯದೆ ಗೊರೂರರ ಸಾಹಿತ್ಯ ಮತ್ತು ಅವರನ್ನು ನೋಡುವ ಬಯಕೆಯನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಹೇಳುವುದು ಇಲ್ಲಿನ ಸ್ವಾರಸ್ಯವಾಗಿದೆ .

### 2. " ನಾನೇ ಆ ಪ್ರಾಣಿ "

ಆಯ್ಕೆ : ಈ ವಾಕ್ಯವನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ' ಕನ್ಯಾಕುಮಾರಿ ಮತ್ತು ಇತರ ಕಥೆಗಳು ' ಕಥಾ ಸಂಕಲನದಿಂದ ಆರಿಸಲಾಗಿರುವ ' ಕನ್ನಡ ಮೌಲ್ವಿ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ , ಸಂದರ್ಭ : ಮೌಲ್ವಿಯವರು ತಮ್ಮ ಎದುರಿಗಿರುವವರು ಗೊರೂರು ಅವರೆಂದು ತಿಳಿಯದೆ " ಗೊರೂರರು ನೋಡಬೇಕಾದ ಮನುಷ್ಯರು " ಎಂದು ಹೇಳಿದಾಗ ಗೊರೂರರು " ಅವರು ನಿಮ್ಮೆದುರಿಗೆ ಬಂದರೆ ಏನು ಮಾಡುತ್ತೀರಿ ? " ಎಂದಾಗ ಮೌಲ್ವಿಯವರು ಎನ್ನುತ್ತಾರೆ , ಆಗ ಸಾಹೇಬರು " ಮಾಡುವುದೇನು ? ಅತ್ಯಂತ ಸಂತೋಷದಿಂದ ಆಲಿಂಗನ ಮಾಡಿಕೊಳ್ಳುತ್ತೇನೆ " ಎಂದರು . ಆ ಸಂದರ್ಭದಲ್ಲಿ ಗೊರೂರರು " ನಾನೇ ಆ ಪ್ರಾಣಿ " ಎಂದು ಹಾಸ್ಯವಾಗಿ ಹೇಳುತ್ತಾರೆ .

ಸ್ವಾರಸ್ಯ : ತಮ್ಮ ಎದುರಿಗಿರುವವರು ಗೊರೂರರೆಂದು ತಿಳಿಯದ ಮೌಲ್ವಿ ಮತ್ತು ಆ ಸನ್ನಿವೇಶದಲ್ಲಿ ಗೊರೂರರ ಹಾಸ್ಯ ಪ್ರಜ್ಞೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ .

### 3. " ನಾನು ಕಲಿತಿದ್ದು ಉರ್ದು , ಕಲಿಸಿದ್ದು ಕನ್ನಡ "

ಆಯ್ಕೆ : ಈ ವಾಕ್ಯವನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ' ಕನ್ಯಾಕುಮಾರಿ ಮತ್ತು ಇತರ ಕಥೆಗಳು ' ಕಥಾ ಸಂಕಲನದಿಂದ ಆರಿಸಲಾಗಿರುವ ' ಕನ್ನಡ ಮೌಲ್ವಿ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಮೌಲ್ವಿಯವರನ್ನು ಕುರಿತು ಸಂದರ್ಭ : ಗೊರೂರರು " ನೀವು ನಿವೃತ್ತರಾದ್ದು ಕನ್ನಡ ಉಪಾಧ್ಯಾಯರಾಗಿಯೋ ಉರ್ದು ಉಪಾಧ್ಯಾಯರಾಗಿಯೋ ? " ಎಂದಾಗ ಅವರು " ಕನ್ನಡ ಉಪಾಧ್ಯಾಯರಾ " ಎಂದರು ಆಗ ಗೊರೂರರು ಕುತೂಹಲದಿಂದ " ಹಾಗಾದರೆ ನಿಮಗೆ ಉರ್ದು



KannadaPdf.com

ಬರುವುದಿಲ್ಲವೇ ? " ಎಂದು ಕೇಳಿದ ಸಂದರ್ಭದಲ್ಲಿ ಮೌಲ್ವಿಯವರು " ನಾನು ಕಲಿತಿದ್ದು ಉರ್ದು , ಕಲಿಸಿದ್ದು , ಕನ್ನಡ " ಎಂದು ಕೇಳಿದರು .

ಸ್ವಾರಸ್ಯ : ಮೌಲ್ವಿಯು ಕಲಿತದ್ದು ಉರ್ದು ಭಾಷೆಯಾದರು ಅವರಿಗೆ ಕನ್ನಡ ಭಾಷೆಯ ಬಗ್ಗೆ ಇದ್ದ ಅಭಿಮಾನ ಇಲ್ಲಿ ಸ್ವಾರಸ್ಯವಾಗಿ ಮೂಡಿಬಂದಿದೆ .

### 5. " ನಿಮಗೆ ಕನ್ನಡ ಬರುತ್ತದೆಯೇ ?

" ಆಯ್ಕೆ : ಈ ವಾಕ್ಯವನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ' ಕನ್ಯಾಕುಮಾರಿ ಮತ್ತು ಇತರ ಕಥೆಗಳು ' ಕಥಾ ಸಂಕಲನದಿಂದ ಆರಿಸಲಾಗಿರುವ ' ಕನ್ನಡ ಮೌಲ್ವಿ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ : ಗೊರೂರರು ಪ್ರಯಾಣಿಸುತ್ತಿದ್ದ ಬಸ್ಸಿಗೆ ಒಬ್ಬ ಮುಸಲ್ಮಾನ ಹತ್ತಿದ , ಆಕರ್ಷಕವಾಗಿದ್ದ ಆತನನ್ನು ನೋಡುತ್ತಿದ್ದಂತೆ ಅವರನ್ನು ಆಕರ್ಷಿಸಿದ್ದು ಆ ಗೃಹಸ್ಥನ ಕೈಲಿದ್ದ ' ಕುಮಾರವ್ಯಾಸ ಭಾರತ ಕೃತಿ , ಇದ್ದಕ್ಕಿದ್ದಂತೆ ಗೊರೂರರಿಗೆ ಆ ಸಾಹೇಬರ ಬಗ್ಗೆ ಏನೋ ಒಂದು ಅನಿರ್ವಚನೀಯವಾದ ಬಾಂಧವ್ಯ ಉಂಟಾಯಿತು . ಆಗ ಅವರು ಹೇಗಾದರೂ ಮಾಡಿ ಆತನನ್ನು ಮಾತನಾಡಿಸಬೇಕು ಎಂದು ಬಳಿಗೆ ಹೋಗಿ " ನಿಮಗೆ ಕನ್ನಡ ಬರುತ್ತದೆಯೇ " ಎಂದು ಆ ಸಂದರ್ಭದಲ್ಲಿ ಕೇಳಿದರು .

ಸ್ವಾರಸ್ಯ : ಜಾತಿ , ಭಾಷೆ , ಪ್ರಾಂತ್ಯಗಳ ಗೊಂದಲದ ಅಂಧಕಾರ ನಮಗೆ ಮುಸುಕಿರುವ ಸಂದರ್ಭದಲ್ಲಿ ಒಬ್ಬ ಮುಸಲ್ಮಾನನ ಕೈಯಲ್ಲಿ ಕುಮಾರವ್ಯಾಸ ಭಾರತ ಇದ್ದದ್ದು ಇಲ್ಲಿನ ಸ್ವಾರಸ್ಯವಾಗಿದೆ .

### 6. " ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲ "

ಆಯ್ಕೆ : ಈ ವಾಕ್ಯವನ್ನು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ' ಕನ್ಯಾಕುಮಾರಿ ಮತ್ತು ಇತರ ಕಥೆಗಳು ' ಕಥಾ ಸಂಕಲನದಿಂದ ಆರಿಸಲಾಗಿರುವ ' ಕನ್ನಡ ಮೌಲ್ವಿ ' ಎಂಬ ಗದ್ಯಭಾಗದಿಂದ ತೆಗೆದುಕೊಳ್ಳಲಾಗಿದೆ . ಸಂದರ್ಭ : ಗೊರೂರರು ಮೌಲ್ವಿಯವರನ್ನು ಕುರಿತು " ನೀವು , ಕನ್ನಡ ಪಾಠ ಚೆನ್ನಾಗಿ ಮಾಡುತ್ತೀರಾ ? " ಎಂದು ಕೇಳಿದ ಸಂದರ್ಭದಲ್ಲಿ ಅವರು ತೃಪ್ತಿಯಿಂದ " ನನ್ನ ಸಮಾನ ಪಾಠ ಮಾಡುವವರು ಯಾರೂ ಇಲ್ಲವೆಂದು ಪ್ರಶಸ್ತಿಯನ್ನು ಎಲ್ಲರಿಂದಲೂ ಪಡೆದಿದ್ದೇನೆ . ಪ್ರೈಮರಿ ಶಿಕ್ಷಕರ ಸಮ್ಮೇಳನದಲ್ಲಿ ಒಂದು ಮಾದರಿ ಪಾಠ ಮಾಡಲು ಕೊಟ್ಟರು . ಹುಡುಗರು ಎಷ್ಟು ಆಸಕ್ತಿಯಿಂದ ಕೇಳುತ್ತಿದ್ದರೋ , ಉಪಾಧ್ಯಾಯರು ಅಷ್ಟೇ ಆಸಕ್ತಿಯಿಂದ ಕೇಳುತ್ತಿದ್ದರು " ಎಂದು ಹೇಳಿದರು .

ಸ್ವಾರಸ್ಯ : ಒಬ್ಬ ಮೌಲ್ವಿಯಾಗಿ ಮಾದರಿ ಪಾಠ ನೀಡುವಷ್ಟು ಕನ್ನಡ ಭಾಷೆಯಲ್ಲಿ ಪಾಂಡಿತ್ಯ , ಅಭಿಮಾನ ಹೊಂದಿದ್ದುದು ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ .

## ಭಾಷಾ ಚಟುವಟಿಕೆ

### 1. ಆಗಮಸಂಧಿ ಎಂದರೇನು ? ಉದಾಹರಣೆ ಕೊಡಿ .

ಉತ್ತರ : ಸ್ವರದ ಮುಂದೆ ಸ್ವರವು ಬಂದು ಸಂಧಿಯಾದಾಗ ಪೂರ್ವಪದದ ಕೊನೆಯ ಸ್ವರ ಹಾಗೂ ಉತ್ತರ ಪದದ ಮೊದಲ ಸ್ವರಗಳ ಮಧ್ಯದಲ್ಲಿ ' ಯ್ ' ಕಾರವನ್ನು ಅಥವಾ ' ವ ' ಕಾರವನ್ನು ಹೊಸದಾಗಿ ಸೇರಿಸಿ ಹೇಳಿದರೆ ಅದು ಅಗಮಸಂಧಿ ,

ಉದಾ : ಹಳ್ಳಿ ಅಲ್ಲಿ = ಹಳ್ಳಿಯಲ್ಲಿ

ಭಾವನೆ + ಉಂಟಾಯಿತು = ಭಾವನೆಯುಂಟಾಯಿತು



KannadaPdf.com

ಗುರು+ ಅನ್ನು = ಗುರುವನ್ನು

ಸ್ವಾರಸ್ಯ + ಇಲ್ಲ = ಸ್ವಾರಸ್ಯವಿಲ್ಲ .

**2. ಆದೇಶಸಂಧಿ ಎಂದರೇನು ? ಉದಾಹರಣೆ ಕೊಡಿ .**

ಉತ್ತರ : ಉತ್ತರ ಪದದ ಆದಿಯಲ್ಲಿರುವ ಕತಪ ವ್ಯಂಜನಗಳಿಗೆ ಕ್ರಮವಾಗಿ ಗ , ದ , ಬ ವ್ಯಂಜನಗಳು ಆದೇಶವಾಗುವುವು . ಇದನ್ನು ಆದೇಶಸಂಧಿ ಎನ್ನುವರು .

ಕೆಲವೊಮ್ಮೆ ಉತ್ತರ ಪದದ ಆದಿಯ ಪ್ , ಬ್ , ಮ್ ವ್ಯಂಜನಗಳಿಗೆ ‘ ವ ‘ ಕಾರವು ಆದೇಶವಾಗುವುದು .

ತುದಿ + ಕಾಲಲ್ಲಿ ( ಕ್ > ಗ್ ) = ತುದಿಗಾಲಲ್ಲಿ .

ಹುಲಿ + ತೊಗಲು ( ತ್ > ದ್ ) = ಹುಲಿದೊಗಲು

ಕಣ್ + ಪನಿ ( ಪ್ > ಬ್ ) = ಕಂಬನಿ

ನೀರ್ + ಪನಿ ( ಪ್ > ವ್ ) = ನೀರ್ವನಿ

ಕಡು+ ಬೆಳ್ಪು (ಬ್ > ವ್ ) = ಕಡುವೆಳ್ಪು

ಮೇಲ್ + ಮಾತು ( ಮ್ > ವ್ ) = ಮೆಲ್ವಾತು

## 3. ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ .

1 , ಅಂಧಕಾರ = ಜ್ಞಾನದ ಬಲದಿಂದ ಅಂಧಕಾರವು ದೂರಾಗುತ್ತದೆ

2 , ಹದಿನಾರಾಣೆ = ಹಿಂದಿನ ಕಾಲದಲ್ಲಿ ಹದಿನಾರಾಣೆಯು ಚಲಾವಣೆಯಲ್ಲಿತ್ತು ,

3 , ನಿಭಾಯಿಸು = ಜೀವನದಲ್ಲಿ ಏನೇ ಬಂದರೂ ಧೈರ್ಯದಿಂದ ನಿಭಾಯಿಸಬೇಕು .

4 , ಮುಸುಕಿರುವ = ಮಳೆಗಾಲದಲ್ಲಿ ಹೆಚ್ಚು ಮುಸುಕಿರುವ ವಾತಾವರಣವನ್ನು ಕಾಣುತ್ತೇವೆ

**4. ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ ,**

ಪಾತ್ರವನ್ನು, ಶುದ್ಧಿಯನ್ನು , ಚಳಿಗಾಲ , ಪಡೆದಿದ್ದೇನೆ , ಬೆಮರ್ವನಿ

| | | | | | |
|---|---|---|---|---|---|
| ಪಾತ್ರ | + | ಅನ್ನು | = | ಪಾತ್ರವನ್ನು | ವಕಾರಾಗಮಸಂಧಿ |
| ಶುದ್ಧಿ | + | ಅನ್ನು | = | ಶುದ್ಧಿಯನ್ನು | ಯಕಾರಾಗಮಸಂಧಿ |
| ಚಳಿ | + | ಕಾಲ | = | ಚಳಿಗಾಲ | ಆದೇಶಸಂಧಿ |

KannadaPdf.com

| | | | | | |
|---|---|---|---|---|---|
| ಪಡೆದು | + | ಇದ್ದೇನೆ | = | ಪಡೆದಿದ್ದೇನೆ | ಲೋಪಸಂಧಿ |
| ಬೆಮರ್ | + | ಪನಿ | = | ಬೆಮರ್ವನಿ | ಆದೇಶಸಂಧಿ |

KannadaPdf.com